**OS-88/2018**
**PW-2**

**<u>ದಿನಾಂಕಃ 22.08.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಪಾಟೀ ಸವಾಲುಃ ಪ್ರತಿ**ವಾದಿ ಪರ** ಶ್ರೀ ಬಿ ಎಮ್ ಎನ್ **ವಕೀಲರಿಂದಃ**</u>

ನಾನು, ವಾದಿ ಮತ್ತು ಸಾಕ್ಷಿದಾರರಾದ ಮಹದೇವುರವರು ಒಂದೇ ಗ್ರಾಮದವರು ಮತ್ತು ಒಂದೇ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ವಾದಿಯು ಈ ದಾವೆಯನ್ನು ಸರ್ವೆ ನಂಬರ್ 105 ರ 24 ಗುಂಟೆ ಜಮೀನಿಗೆ ಸಲ್ಲಿಸಿರುತ್ತಾರೆ. ಸದರಿ ಸರ್ವೆ ನಂಬರ್ 105 ರ 24 ಗುಂಟೆ ಜಮೀನಿಗೆ ಚೆಕ್ಕು ಬಂದಿ ಪೂರ್ವಕ್ಕೆ ವಾದಿಯವರ ಜಮೀನು, ಪಶ್ಚಿಮಕ್ಕೆ ವಾದಿಯವರ ಜಮೀನು, ಉತ್ತರಕ್ಕೆ ಬೂದಿ ಸಿದ್ದೇಗೌಡನ ಮಹದೇವುರವರ ಜಮೀನು, ದಕ್ಷಿಣಕ್ಕೆ ಕುಳ್ಳೇಗೌಡರವರ ಜಮೀನು ಬರುತ್ತದೆ. ಸದರಿ ಮೇಲೆ ತಿಳಿಸಿದ ಚೆಕ್ಕು ಬಂದಿಯೊಳಗಿನ ಆಸ್ತಿಗೆ ಸಂಬಂಧಿಸಿದಂತೆ 5 ವರ್ಷದ ಹಿಂದೆ ಕ್ರಯ ಪತ್ರವನ್ನು ನೋಡಿರುತ್ತೇನೆ. ಸದರಿ ಕ್ರಯ ಪತ್ರದ ಮೂಲಕ ಕುಪ್ಪೀಗೌಡರವರು ನಳಮಾದಮ್ಮರವರಿಂದ ಆಸ್ತಿಯನ್ನು ಖರೀದಿಸಿರುತ್ತಾರೆ. ಸದರಿ ಸರ್ವೆ ನಂಬರ್ 105 ರ ಪಹಣಿ ಪತ್ರಿಕೆಯು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ.

ಜಗಜೀವನ ಗ್ರಾಮದಿಂದ ನಮ್ಮ ಕಗ್ಗಲೀ ಪುರ ಗ್ರಾಮಕ್ಕೆ ¾ ಕಿ ಮೀ ದೂರವಾಗುತ್ತದೆ. ದಾವಾ ಅನುಸೂಚಿ ಸ್ವತ್ತು ತಮ್ಮಡೀಪುರ ಗ್ರಾಮದಲ್ಲಿ ಬರುತ್ತದೆ. ದಾವಾ ಅನುಸೂಚಿ ಸ್ವತ್ತನ್ನು ಜಗಜೀವನ ಗ್ರಾಮದ ಮಾದಿಗ ಜನಾಂಗಕ್ಕೆ ಸ್ಮಶಾನದ ಉದ್ದೇಶಕ್ಕಾಗಿ ಸರ್ಕಾರದವರು ಮಂಜೂರು ಮಾಡಿರುತ್ತಾರೆ ಎಂದರೆ ಸರಿ. ದಾವಾ ಅನುಸೂಚಿ ಸ್ವತ್ತಿನಲ್ಲಿ ಜಗಜೀವನ ಗ್ರಾಮದ ಗ್ರಾಮಸ್ಥರು ಹೆಣಗಳನ್ನು ಊಳುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಿಸಿದಂತೆ ಸರ್ಕಾರದ ವತಿಯಿಂದ ಏನು ಆದೇಶ ಆಗಿದೆ ಎಂದು ನಾನು ಓದಿ ತಿಳಿದುಕೊಂಡಿರುವುದಿಲ್ಲ. ದಾವಾ ಅನುಸೂಚಿ ಸ್ವತ್ತಿನಲ್ಲಿ ವಾದಿಯವರಿಗೆ ಯಾವುದೇ ಹಕ್ಕು ಹಿತಾಸಕ್ತಿ ಅಥವಾ ಸ್ವಾಧೀನತೆ ಇಲ್ಲದೇ ಇದ್ದರೂ ಸಹ ವಾದಿಯ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರದ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>1 ರಿಂದ 3 ನೇ ಪ್ರತಿವಾದಿಗಳ ಪರ ವಕೀಲರು ಈ ಮೇಲ್ಕಂಡ ಪಾಟೀ ಸವಾಲನ್ನು ಯಥಾವತ್ತಾಗಿ ಅಳವಡಿಸಿಕೊಳ್ಳುತ್ತಾರೆ.</u>

<u>ಮರುವಿಚಾರಣೆಃ</u> ಇರುವುದಿಲ್ಲ.

**OS-88/2018**
**PW-2**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ